# ತುಮಕೂರು ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು

ಬಿ.ಹೆಚ್. ರಸ್ತೆ, ತುಮಕೂರು.572103ದೂ.ಸಂ: 0816-2260220

ಸಂಖ್ಯೆ/ತುವಿ./ವಿ.ವಿ.ಕಾ.ತು/ದ.ಆ/2023-24/ ದಿನಾಂಕ:20.07.2023

**:ದರಪಟ್ಟಿ ಆಹ್ವಾನ:**

ವಿಷಯ: ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಪ್ರಯೋಗಾಲಯಕ್ಕೆ "GAS PIPE LINE "ಅಳವಡಿಸಲು ದರಪಟ್ಟಿ ಆಹ್ವಾನಿಸುವ ಕುರಿತು.

ಉಲ್ಲೇಖ:1. ಸಂಖ್ಯೆ:ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022-23/3095 ದಿನಾಂಕ:09.09.2022

2. ಹಣಕಾಸು ಯೋಜನೆ & ಮೇಲ್ವಿಚಾರಣಾ ಸಮಿತಿ ಸಭೆಯ ಸಭಾ ನಿರ್ಣಯ ದಿನಾಂಕ:16.05.2023

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01) ರ ವಿಶ್ವವಿದ್ಯಾನಿಲಯದ ಆದೇಶದಂತೆ & KTPP ನಿಯಮ 4(i) & 4(ii) ಉಲ್ಲೇಖ (2) ರ ಸಭಾ ನಿರ್ಣಯದ ಮೇರೆಗೆ ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಪ್ರಯೋಗಾಲಯಕ್ಕೆ "GAS PIPE LINE "ಅಳವಡಿಸಲು ಉಲ್ಲೇಖ (1) ಮತ್ತು (2) ರ ಅನ್ವಯ ಹಾಗೂ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಆಸಕ್ತ ನೋಂದಾಯಿತ ಸಂಸ್ಥೆಗಳಿಂದ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ದರಪಟ್ಟಿಗಳನ್ನು ಆಹ್ವಾನಿಸಿದೆ.

| ಕ್ರಸಂ | ವಿವರ | ದರ (ರೂ.ಗಳಲ್ಲಿ) (ಎಲ್ಲಾ ತೆರಿಗೆಗಳನ್ನು ಸೇರಿ) |
|---|---|---|
| 1 | LPG COPPER TUBE 3X8X14 SWG AS PER ASTM B68<br>BRASS VALVE WITH HANDLE<br>BRASS TEE,BRASS BUSH AND BRASS NIPPLE<br>GAS HOLE PIPE<br>PRESSURE VALVE<br>FERRULE NUT | |
| 2 | INSTALLATION AND TRANSPORTATION CHARGES | |
| | **TOTAL** | |

<u>ಷರತ್ತು ಮತ್ತು ನಿಬಂಧನೆಗಳು</u>

1. ಮುಚ್ಚಿದ ಲಕೋಟೆಯ ಮೇಲೆ "GAS PIPE LINE "ಅಳವಡಿಸಲು ದರಪಟ್ಟಿ ಎಂದು ನಮೂದಿಸುವುದು.
2. ಈ ದರಪಟ್ಟಿಯು ಕೆ.ಟಿ.ಪಿ.ಪಿ ನಿಯಮ 4(i) (ii) ರ ತಿದ್ದುಪಡಿ ವಿಧೇಯಕದಂತೆ, ಅನ್ವಯಿಸಿರುತ್ತದೆ.
3. ದರಪಟ್ಟಿಯೊಂದಿಗೆ ತಮ್ಮ ಸಂಸ್ಥೆಯು ನೊಂದಾಣಿಯಾಗಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
4. ಸದರಿ ದರಪಟ್ಟಿಯು ಒಂದು ಲಕ್ಷ ಮೀರಿದ ಸಾಮಗ್ರಿಗಳು/ಸೇವೆಗಳಿಗೆ ಸಂಬಂಧಿಸಿರುವುದರಿಂದ ಸದರಿ ಸೇವೆಗೆ ಕೆ.ಟಿ.ಪಿ.ಪಿ ನಿಯಮಾನುಸಾರ ರೂ.10,000/- ಗಳ ಇ.ಎಂ.ಡಿ ಮೊತ್ತವಾಗಿ **Banker's guarantee / Demand Draft/Pay Order/FDR in favor of "Principal university college of science" Tumkur University payable at Tumakuru** ಇವರಿಗೆ ದರಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು.
5. ದರಪಟ್ಟಿಯ ಜೊತೆಗೆ ಇತರೆ ಸರ್ಕಾರಿ ಇಲಾಖೆಗಳಿಗೆ ಸರಬರಾಜಿನ ಸಂಬಂಧದ ಕಾರ್ಯಾದೇಶಗಳು ಮತ್ತು ಸೇವಾ ತೃಪ್ತಿದಾಯಕ ಪ್ರಮಾಣ ಪತ್ರಗಳನ್ನು **(Performance / Satisfactory Certficate)** ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
6. ಇ.ಎಂ.ಡಿ ವಿನಾಯಿತಿ ಕೋರಿದಲ್ಲಿ ಸದರಿ ಸಂಸ್ಥೆಯವರು **MSME** ಅಥವಾ **NSIC** ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ದರಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು.
7. ದರಪಟ್ಟಿಗಳನ್ನು ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು-572 103, ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಜವಾಬ್ದಾರರಾಗುವುದಿಲ್ಲ.

ಮ.ತಿ.ನೋ

8. ದರಪಟ್ಟಿಯನ್ನು ಸಲ್ಲಿಸಲು **ಕೊನೆಯ ದಿನಾಂಕ: 11.08.2023 ಅಪರಾಹ್ನ 3.00 ಗಂಟೆ.**
9. ದರಪಟ್ಟಿಯನ್ನು **ದಿನಾಂಕ:14.08.2023 ರಂದು ಅಪರಾಹ್ನ 12.00** ಕ್ಕೆ ತೆರೆಯಲಾಗುವುದು.
10. ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No.ದಾಖಲೆಗಳನ್ನು ಕಡ್ಡಾಯವಾಗಿ ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
11. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮತ್ತು ಸೇವಾವೆಚ್ಚವನ್ನು ಒಳಗೊಂಡಿರತಕ್ಕದ್ದು.
12. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ 60 ದಿನಗಳ ಅವಧಿಯವರೆಗೆ ಚಾಲ್ತಿಯಲ್ಲಿರಬೇಕು.
13. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ಅಧಿಕೃತ ಮಾರಾಟಗಾರರು / ಸರಬರಾಜುದಾರರು / ತಯಾರಕರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.
14. ಸರಬರಾಜು ಮಾಡಿದ 30 ದಿನಗಳೊಳಗೆ ಹುಂಡಿಯನ್ನು ಪಾವತಿಸಲಾಗುವುದು.
15. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಕಾಯ್ದಿರಿಸಿಕೊಂಡಿದೆ.
16. ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಒಂದು ವೇಳೆ ತಮ್ಮ ದರಪಟ್ಟಿಯನ್ನು ತಾತ್ಕಾಲಿಕವಾಗಿ ಅಂಗೀಕರಿಸಿದ್ದಲ್ಲಿ **ಮಾದರಿ ಉಪಕರಣಗಳನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಸೂಚಿಸುವಂತಹ ಸ್ಥಳಕ್ಕೆ ಸಲ್ಲಿಸಿ** ಪ್ರಚುರಪಡಿಸತಕ್ಕದ್ದು
17. ತಮ್ಮ ದರಪಟ್ಟಿಯಲ್ಲಿ ಎಲ್ಲಾ ತೆರಿಗೆ & ಸಾಗಾಣಿಕ ವೆಚ್ಚ ಒಳಗೊಂಡಿರುವಂತೆ ದರಗಳನ್ನು ನಮೂದಿಸುವುದು
18. ತಮ್ಮ ಸಂಸ್ಥೆಯು ಸರಬರಾಜು ಮಾಡಲು ಉದ್ದೇಶಿಸಿರುವ **"GAS PIPE LINE"** ಸಾಮಗ್ರಿಗಳ ಸಂರಚನೆಗಳಲ್ಲಿ ವ್ಯತ್ಯಾಸ ಇದ್ದರೆ ಸಂರಚನೆಗಳ ಮಾಹಿತಿ / ಮಾದರಿ ಸಂಖ್ಯೆಗಳನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
19. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಕಾಯ್ದಿರಿಸಿಕೊಂಡಿದೆ.
20. ಸಂಸ್ಥೆಯ ಯಾವುದೇ ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
21. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
22. ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಕಾರ್ಯಾದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
23. ಹೆಚ್ಚಿನ ವಿವರಗಳು ಅಥವಾ ಮಾಹಿತಿಯ ಅಗತ್ಯವಿದ್ದಲ್ಲಿ, ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

ಪ್ರಾಂಶುಪಾಲರು

**ಪ್ರಾಂಶುಪಾಲರು**
**ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು**
**ತುಮಕೂರು-572 103**